ಉತ್ತರ ಕನ್ನಡ ಜಿಲ್ಲೆಯ ಕುಮಟಾ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ:–

1. ಸರ್ಕಾರಿ ಪದವಿ ಪೂರ್ವ ಕಾಲೇಜು, ಬಾಡ ಇಲ್ಲಿಗೆ 5 ಕೊಠಡಿಗಳು,
2. ಸ.ಪ.ಪೂ.ಕಾಲೇಜು, ಹಿರೇಗುತ್ತಿ, ಇಲ್ಲಿಗೆ ಹೊಸ ಕಟ್ಟಡ,
3. ಸ.ಪ.ಪೂ.ಕಾಲೇಜು ನೆಲ್ಲಿಕೇರಿ ಇಲ್ಲಿಗೆ 12 ಕೊಠಡಿಗಳು.
4. ಸ.ಪ.ಪೂ.ಕಾಲೇಜು, ಹೊನ್ನಾವರ ಇಲ್ಲಿಗೆ 3 ಕೊಠಡಿಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ.

**ಉದ್ಯೋಗ ಖಾತರಿ ಕಾಮಗಾರಿಗೆ ಅನುದಾನ ಬಿಡುಗಡೆ**

**460 (642) ಶ್ರೀ ದೊಡ್ಡಪ್ಪಗೌಡ ಶಿವಲಿಂಗೇಗೌಡ ಪಾಟೀಲ್ ನರಿಬೋಳ್ (ಜೇವರ್ಗಿ)** : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೇವರ್ಗಿ ತಾಲ್ಲೂಕಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2009–10ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಗಳ ಎಂ.ಐ.ಎಸ್. ಮಾಹಿತಿಯನ್ನು ದಾಖಲೆ ಮಾಡದಿರಲು ಕಾರಣಗಳೇನು?

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)** :

ಅ) ಹೌದು, 2009–10ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳಿಗೆ ಹಣ ಪಾವತಿಯಾಗದ ಕುರಿತು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಸಂಬಂಧ 2009–10ನೇ ಸಾಲಿನಲ್ಲಿ ಯೋಜನೆಯ ಮಾರ್ಗಸೂಚಿಗಳ ಅನ್ವಯ ಅನುಷ್ಠಾನಗೊಳಿಸಿರುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿ ಹಣ ಪಾವತಿಸಲಾಗಿದೆ. ಹಾಗೂ ಜೇವರ್ಗಿ ತಾಲ್ಲೂಕಿಗೆ ಸಂಬಂಧಿಸಿದಂತೆ ಪ್ರಸ್ತುತ ಸಾಲಿನಲ್ಲಿ ರೂ. 25.59 ಕೋಟಿಗಳು ಲಭ್ಯವಿದ್ದು ಈವರೆಗೂ ರೂ.6.99 ಕೋಟಿಗಳ ವೆಚ್ಚ ಭರಿಸಲಾಗಿದೆ.

ಆ) ಯೋಜನಾ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಅನುಷ್ಠಾನ ಗೊಳಿಸಿರುವ ಕಾಮಗಾರಿಗಳ ಮಾಹಿತಿಯನ್ನು ಎಂಐಎಸ್‌ನಲ್ಲಿ ಅಳವಡಿಸಲು ಅವಕಾಶವಿಲ್ಲದ ಕಾರಣ ಎಂಐಎಸ್‌ನಲ್ಲಿ ಮಾಹಿತಿಯನ್ನು ದಾಖಲು ಮಾಡಿರುವುದಿಲ್ಲ.

**ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರ ನೇಮಕ**

**(753) 461 ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ)** : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅಭಿವೃದ್ಧಿ ಸಮಿತಿಗಳನ್ನು ರಚಿಸಲು ಸರ್ಕಾರದ ಮಾರ್ಗ ಸೂಚಿಯಂತೆ ಅಧ್ಯಕ್ಷರನ್ನು ನೇಮಿಸಲು ನಾಲ್ಕು ಚುನಾಯಿತ ಪ್ರತಿನಿಧಿಗಳನ್ನು ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂತಹ ಸಂದರ್ಭದಲ್ಲಿ ಯಾರು ಅಧ್ಯಕ್ಷರಾಗಲು ಅಧಿಕಾರ ಇರುತ್ತದೆ. ಈ ಶಾಲಾ ಸಮಿತಿಯನ್ನು ಯಾರು ರಚಿಸಬಹುದು;

ಇ) ಹಾಗಿದ್ದಲ್ಲಿ ಚಿಂತಾಮಣಿ ತಾಲ್ಲೂಕಿನ ತಳಗವಾರ ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಕ್ಷರು ಹಾಗೂ ಸಮಿತಿ ರಚಿಸುವುದು ಯಾರೆಂಬುದರ ಬಗ್ಗೆ ಗೊಂದಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಸಮಸ್ಯೆ ಪರಿಹರಿಸಲು ಸ್ಪಷ್ಟೀಕರಣ ನೀಡಲಾಗುವುದೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)** :

ಅ) ಬಂದಿದೆ.

ಆ) ಕಾಲೇಜು ಅಭಿವೃದ್ಧಿ ಸಮಿತಿಯನ್ನು ಪುನರ್ ರಚಿಸಲು ಸಮಗ್ರವಾದ ಕರಡು ನಿಯಮಗಳನ್ನು ತಯಾರಿಸಿ ಸಲ್ಲಿಸುವಂತೆ ನಿರ್ದೇಶಕರಿಗೆ ಸೂಚಿಸಲಾಗಿದೆ.

ಇ) ಬಂದಿರುತ್ತದೆ.